**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No. 326/2023**

**PW-4 CW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಅಮರೇಶ ತಂದೆ ಪ್ರಭಣ್ಣ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಮಲದಕಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | 27-02-2025 |

---

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ದಿನಾಂಕ 22-01-2023 ರಂದು ಮಧ್ಯಾಹ್ನ 1-00 ರಿಂದ 1-30 ರ ಸುಮಾರಿಗೆ ಚೈತ್ರಾ ಇವರ ಮನೆಯ ಹತ್ತಿರ ಗಲಾಟೆ ಆಗಿರುತ್ತದೆ. ಘಟನೆ ಆದ 03 ದಿನಗಳ ನಂತರ ಪೊಲೀಸರು ಘಟನಾ ಸ್ಥಳದಲ್ಲಿ ಬಂದು ಪೊಟೋ ತೆಗೆದುಕೊಂಡಿರುತ್ತಾರೆ. ನಿಪಿ-1 ರ ಮೇಲೆ ಸಹಿಯನ್ನು ಚಾಸಾ-1 ರವರ ಮನೆಯಲ್ಲಿ ಮಾಡಿರುತ್ತೇನೆ. ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಮ್.ಆರ್ ವಕೀಲರಿಂದ.**

ಘಟನಾ ಸ್ಥಳದಲ್ಲಿ ಮತ್ತು ಠಾಣೆಯಲ್ಲಿ ತಲಾ ಒಂದೊಂದು ಸಹಿಯನ್ನು ಮಾಡಿರುತ್ತೇನೆ. ಠಾಣೆಯಲ್ಲಿ ಸಹಿ ಮಾಡಿದಾಗ ಬೆಳಿಗ್ಗೆ 9-00 ಗಂಟೆ ಆಗಿತ್ತು. ಮನೆಯ ಒಳಗಡೆ ಗಲಾಟೆ ಆಗುತ್ತಿರುವಾಗ ನಾನು ರಸ್ತೆಯ ಮೇಲೆ ನನ್ನ ದ್ವಿಚಕ್ರ ವಾಹನದ ಮೇಲೆ ಬರುತ್ತಿದ್ದೆ. ಅಂದಾಜು ಮನೆಯಲ್ಲಿ 08 ಜನರಿದ್ದರು. ಘಟನಾ ಸ್ಥಳದಲ್ಲಿ ಪೊಲೀಸರು ಏನು ಬರೆದುಕೊಂಡಿರುತ್ತಾರೆ ಓದಿ ಹೇಳಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ಘಟನೆ ಆಗಿರುವುದನ್ನು ನಾನು ಕಣ್ಣಾರೆ ನೋಡಿರುತ್ತೆನೆ ಎಂದು ಹೇಳಿ ಬರೆಸಿರುತ್ತೇನೆ. ಅಷ್ಟನ್ನು ಹೊರತುಪಡಿಸಿ ಬೇರೆ ಏನು ಬರೆದಿರುವುದಿಲ್ಲ. ದಿನಾಂಕ 22-01-2023 ರಂದು ಮಧ್ಯಾಹ್ನ 1-00 ರಿಂದ 1-30 ರ ಅವಧಿಯಲ್ಲಿ ಚಾಸಾ-1 ರವರ ಮನೆಯಲ್ಲಿ ಗಲಾಟೆಯ ಶಬ್ದ ಕೇಳಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು ನನ್ನದು ಒಂದೇ ಗ್ರಾಮ ಎಂದರೆ ಸರಿ, ಯಾವುದೇ ಘಟನೆ ಆಗದೇ ಇದ್ದರೂ

ನಮ್ಮೂರಿನ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.